OS.No.33/2021
P.w-1

OS.No.33/2021
P.w-1

ದಿನಾಂಕ 09-04-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಮ್.ಎಮ್ ವಕೀಲರಿಂದ.**

ಶಾಲೆ ಕಟ್ಟಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಶಾಲೆಯನ್ನು ಎಷ್ಟು ವರ್ಷಗಳ ಹಿಂದೆ ಕಟ್ಟಲಾಗಿದೆ ಎಂದು ನನಗೆ ನೆನಪಿರುವುದಿಲ್ಲ. ದಾವಾ ಸ್ವತ್ತಿನಲ್ಲಿ ಶಾಲೆ ಏಕೆ ಕಟ್ಟಿರುತ್ತಿರಿ ಎಂದು ಶಾಲೆ ಕಟ್ಟಿದವರನ್ನು ಪ್ರಶ್ನೆ ಮಾಡಿರುತ್ತಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲಾ ಎಂದು ನುಡಿಯುತ್ತಾರೆ. ಶಾಲೆ ಕಟ್ಟಿರುವ ಸ್ಥಳದ ಮಾರುಕಟ್ಟೆಯ ಮೌಲ್ಯ ನನಗೆ ಹೇಳಲು ಬರುವುದಿಲ್ಲ.

1953 ರಲ್ಲಿ ನನಗೆ 06 ವರ್ಷ ವಯಸ್ಸಾಗಿತ್ತು. ಸದರಿ ವಯಸ್ಸಿನಲ್ಲಿ ಆದಾಯವಿತ್ತೆ ಎಂಬ ಪ್ರಶ್ನೆಗೆ ಸಾಕ್ಷಿಯು ನಾವು ಚಿಕ್ಕವರಿದ್ದದ್ದರಿಂದ ನಮ್ಮ ಹಿರಿಯರ ಆದಾಯ ಇತ್ತು ಎಂದು ನುಡಿಯುತ್ತಾರೆ. ನಾನು ದಾವಾ ಅನುಸೂಚಿ-1 ಸ್ವತ್ತನ್ನು ಖರೀದಿಸಲು ಯಾರು ಹಣ ನೀಡಿದ್ದರು ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಚಿಕ್ಕವನಿದ್ದುದ್ದರಿಂದ ಗೊತ್ತಿಲ್ಲ ನನ್ನ ಅಜ್ಜಿ ಖರೀದಿಸಿರುತ್ತಾಳೆ ಎಂದು

ನುಡಿಯುತ್ತಾರೆ. ದಾವಾ ಸ್ವತ್ತನ್ನು ನನ್ನ ಅಜ್ಜಿ ಖರೀದಿಸಿರುವ ವಿಚಾರವನ್ನು ವಾದ ಪತ್ರದಲ್ಲಿ ನಮೂದಿಸಿರುತ್ತಿರಾ ಎಂಬ ಪ್ರಶ್ನೆಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ವಾದ ಪತ್ರದ ಪ್ಯಾರಾ ನಂ.5 ರಲ್ಲಿ ದಾವಾ ಅನುಸೂಚಿ ಸ್ವತ್ತು ನಂ.1 ನ್ನು ನನ್ನ ತಂದೆ ಖರೀದಿಸಿರುತ್ತಾರೆ ಎಂದು ನಾನು ನಮೂದಿಸಿರುವುದಿಲ್ಲ. ನಮ್ಮ ತಂದೆ ಯಾದಗಿರಿ ತಾಲೂಕಿನಲ್ಲಿ ಗ್ರಾಮ ಲೆಕ್ಕಾಧಿಕಾರಿಯಾಗಿದ್ದರು. ಯಾದಗಿರಿ ತಾಲೂಕಿನ ಕೂಡ್ಲೂರು ಮತ್ತು ಶಹಾಪೂರ ತಾಲೂಕಿನ ಶಿವನೂರು ಗ್ರಾಮದಲ್ಲಿರುವ ಕುಟುಂಬದ ಸ್ವತ್ತುಗಳನ್ನು ನಮ್ಮ ಕುಟುಂಬದವರು ನೋಡಿಕೊಳ್ಳುತ್ತಿದ್ದರು.

ಶರಣಪ್ಪನು ಲೀಜ್‌ನ ಹಣ ಕೊಡುವುದನ್ನು ನಿಲ್ಲಿಸಿದ ನಂತರ ಸ್ವಾಧೀನತೆಯನ್ನು ಬಿಟ್ಟುಕೊಡುವಂತೆ ಕೇಳಿರುತ್ತಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ಲೀಜ್‌ನ ಹಣ ಕೇಳಿದರು ಕೊಡದೇ ಇದ್ದಾಗ ಆತನ ಮತ್ತು ನಮ್ಮ ನಡುವೆ ವೈಮನಸ್ಸು ಉಂಟಾಗಿದ್ದರಿಂದ ಸ್ವಾಧೀನತೆಯನ್ನು ಬಿಟ್ಟು ಕೊಡುವಂತೆ ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಹೆಸರಿನಲ್ಲಿದ್ದ 40 ಎಕರೆ ಜಮೀನನ್ನು 2 ನೇ ಪ್ರತಿವಾದಿ ಮಾರಾಟ ಮಾಡಿದ್ದು ಅದಕ್ಕೆ ನಾನು ಸಹಿ ಮಾಡಿರುವುದು ಯಾವ ವರ್ಷ ಎಂಬ ಪ್ರಶ್ನೆಗೆ ಸಾಕ್ಷಿಯು ಯಾವ ವರ್ಷ ಅಥವಾ ಎಷ್ಟು ವರ್ಷ ಆಗಿರುತ್ತದೆ ಎಂದು ನನಗೆ ಈಗ ಹೇಳಲು ನೆನಪಿರುವುದಿಲ್ಲ. ಅಂದಾಜು ಎಷ್ಟು ವರ್ಷ ಆಗಿರುತ್ತದೆ ಎಂದು ಸಹ ಹೇಳಲು ಬರುವುದಿಲ್ಲ. ಸದರಿ ನನ್ನ ಜಮೀನನ್ನು 2 ನೇ ಪ್ರತಿವಾದಿ ಮಾರಾಟ ಮಾಡುವ ಸಂದರ್ಭದಲ್ಲಿ ನಾನು ಸಹಿ ಮಾಡುವಾಗ ನನ್ನ ಜಮೀನುಗಳನ್ನು ಏಕೆ ಮಾರಾಟ ಮಾಡುತ್ತಿದ್ದಿ ಎಂದು 2 ನೇ ಪ್ರತಿವಾದಿಯನ್ನು ಪ್ರಶ್ನಿಸಿರುತ್ತಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ಆಗಲೇ ನನ್ನ ಮತ್ತು 2 ನೇ ಪ್ರತಿವಾದಿಯ ನಡುವೆ ಭಿನ್ನಾಬಿಪ್ರಾಯ ಆಗಿರುತ್ತದೆ. ಸದರಿ ನನ್ನ ಸಹಿ ಪಡೆದು 2 ನೇ ಪ್ರತಿವಾದಿ ಮಾರಾಟ ಮಾಡಿದ ಜಮೀನಿನ ಕ್ರಯಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ದಾವಾ ಸ್ವತ್ತುಗಳ ಮೇಲೆ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಂದ ದಾವಾ ಸ್ವತ್ತುಗಳನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರದ ಮೂಲಕ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ**.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)**

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.